ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) 23186–10 ಎಕರೆ

ಆ) ಇಲ್ಲ.

ಇ) ರೈತರಿಗೆ ಸ್ವಾಧೀನಪಡಿಸಿಕೊಡುವ ಬಗ್ಗೆ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

ನಮೂನೆ – 50 ರಲ್ಲಿ	ಸಂಖ್ಯೆ	ವಿಸ್ತೀರ್ಣ
ಒಟ್ಟು ಅರ್ಜಿಗಳು	11675	21062–39
ಸಕ್ರಮಗೊಳಿಸಿದ ಅರ್ಜಿಗಳು	3559	5831–03
ತಿರಸ್ಕೃತ ಅರ್ಜಿಗಳು	8125	15231–36
ಬಾಕಿ ಇರುವ ಅರ್ಜಿಗಳು	–	–
ನಮೂನೆ – 53 ರಲ್ಲಿ	**ಸಂಖ್ಯೆ**	**ವಿಸ್ತೀರ್ಣ**
ಒಟ್ಟು ಅರ್ಜಿಗಳು	9570	23186–10
ಸಕ್ರಮಗೊಳಿಸಿದ ಅರ್ಜಿಗಳು	1132	1678–03
ತಿರಸ್ಕೃತ ಅರ್ಜಿಗಳು	2931	7179–22
ಬಾಕಿ ಇರುವ ಅರ್ಜಿಗಳು	5507	14328–25

ಈ) ಗೌರಿಬಿದನೂರು ತಾಲ್ಲೂಕಿಗೆ ಬಗರ್ ಹುಕುಂ ಸಮಿತಿ ಇನ್ನೂ ರಚನೆಯಾಗಿಲ್ಲವಾದ್ದರಿಂದ ಸಮಿತಿ ರಚನೆಯಾದ ತಕ್ಷಣ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

1395 (2018) ಶ್ರೀ ಶಿವಶಂಕರ್ ರೆಡ್ಡಿ. ಎನ್. ಹೆಚ್ (ಗೌರಿಬಿದನೂರು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಜಮೀನು, ನಿವೇಶನಗಳನ್ನು 2006–07ನೇ ಸಾಲಿನಲ್ಲಿ ನೋಂದಾಯಿಸಿದ ಸಂಖ್ಯೆಗಳೆಷ್ಟು;

ಆ) ಇದರಿಂದ ಸರ್ಕಾರಕ್ಕೆ ಬಂದಂತಹ ಆದಾಯ ಎಷ್ಟು;

ಇ) ಈ ಆದಾಯಗಳನ್ನು ಯಾವ ಯಾವ ಯೋಜನೆಗಳ ಕಾರ್ಯಗತಕ್ಕೆ ಪ್ರತಿ ತಾಲ್ಲೂಕುವಾರು ಹಂಚಿಕೆ ಮಾಡಲ್ಪಟ್ಟಿದೆ (ವಿವರ ಒದಗಿಸುವುದು);

ಈ) ನೋಂದಣಿ ಕಾಯಿದೆಗಳ ಕ್ರೋಡೀಕರಣಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) 12,56,145 ಫೆಬ್ರವರಿ ಅಂತ್ಯಕ್ಕೆ

ಆ) ರೂ.3046.84 ಕೋಟಿಗಳು ಫೆಬ್ರವರಿ 2007ರ ಅಂತ್ಯಕ್ಕೆ

ಇ) ರಾಜಸ್ವವು ಸಂಚಿತ ನಿಧಿಗೆ ಜಮಾ ಆಗಲಿದೆ. ಇದರಿಂದಾಗಿ ತಾಲ್ಲೂಕಾವಾರು ಹಂಚಿಕೆ ಮಾಡುವ ಪ್ರಶ್ನೆ ಈ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಇದರಿಂದಾಗಿ ತಾಲ್ಲೂಕಾವಾರು ಹಂಚಿಕೆ ಮಾಡುವ ಪ್ರಶ್ನೆ ಈ ಇಲಾಖೆಯ ಅಧಿಕಾರ ವ್ಯಾಪ್ತಿ ಅಡಿ ಬರುವುದಿಲ್ಲ.

ಈ) ನೋಂದಣಿ ಕಾಯ್ದೆಯು ಕೇಂದ್ರ ಸರ್ಕಾರದ ಕಾಯ್ದೆ ಆಗಿರುವುದರಿಂದ, ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಕ್ರೊಢೀಕರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

1396 (1454) ಶ್ರೀ ಸಿದ್ದು ಸವದಿ (ಜಮಖಂಡಿ) :– ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ, ಮುಧೋಳ್ ಬೀಳಗಿ, ಅಥಣಿ, ರಾಯಬಾಗ್ ಮತ್ತು ಬಿಜಾಪುರ ತಾಲ್ಲೂಕಿನಲ್ಲಿರುವ ಒಟ್ಟು ಕಬ್ಬು ಬೆಳೆಯುವ ಪ್ರದೇಶ ಎಷ್ಟು;

ಆ) ಈ ಎಲ್ಲಾ ತಾಲ್ಲೂಕುಗಳಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿವೆ (ವಿವರ ನೀಡುವುದು);

ಇ) ಜಮಖಂಡಿ ತಾಲ್ಲೂಕಿನಲ್ಲಿಯೇ 5000 ಟನ್ ಸಾಮರ್ಥ್ಯದ 4 ಕಾರ್ಖಾನೆಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಎಷ್ಟು ಹೊಸ ಕಾರ್ಖಾನೆಗಳಿಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ;